ರಾಜ್ಯದಲ್ಲಿ ಎಸ್.ಸಿ/ಎಸ್.ಟಿಯವರಿಗೆ ವಿಶೇಷ ಘಟಕ ಯೋಜನೆಯಡಿ ನೀಡಿರುವ ಸವಲತ್ತುಗಳು.

224(2450)

ಶ್ರೀ ಕರಿಯಣ್ಣ(ಹೊಳಹೊನ್ನೂರು): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಯಾವುದಾದರು ಪರಿಶಿಷ್ಟ ಜಾತಿ : ಪರಿಶಿಷ್ಟ ಜನಾಂಗದ ಅಭಿವೃದ್ಧಿಗಾಗಿ ಕೈಗಾರಿಕೆಗಳನ್ನು ತೆರೆಯಲಾಗಿದೆಯೇ:

ಆ) ಇಲ್ಲದಿದ್ದರೆ, ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ಜನಗಳಿಗೆ ಕೈಗಾರಿಕಾ ಇಲಾಖೆಯಿಂದ ಯಾವ ಸವಲತ್ತುಗಳನ್ನು ಕೊಡಲಾಗುತ್ತಿದೆ; (ವಿವರ ನೀಡುವುದು)?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ಇಲ್ಲ

ಆ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನಗಳಿಗೆ ವಿಶೇಷ ಘಟಕ ಯೋಜನೆ : ಗಿರಿಜನ ಉಪಯೋಜನೆಗಳಡಿಯಲ್ಲಿ ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಿಸಿ ಕೊಡುವ ಸವಲತ್ತನ್ನು ಹಮ್ಮಿಕೊಂಡಿರುತ್ತದೆ.

ವಿವರಗಳು ಈ ಕೆಳಗಿನಂತಿವೆ:

ಹಾಲಿ ವರ್ಷದಲ್ಲಿ ರಾಜ್ಯ ವಲಯ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯನ್ವಯ ಇಲಾಖೆಗೆ ರೂ.142.00 ಲಕ್ಷ ಹಾಗೂ ರೂ.44.00 ಲಕ್ಷ ಸಹಾಯಧನ ಅನುಕ್ರಮವಾಗಿ ಇರುವುದು. ಒಟ್ಟಾಗಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯನ್ವಯ ರೂ.186.00 ಲಕ್ಷ ಅನುದಾನ ಇದ್ದು ಪೂರ್ತಿ ಅನುದಾದನವನ್ನು ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಕೈಗಾರಿಕಾ ಕುಶಲಕರ್ಮಿಗಳಿಗೆ ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲಾಗುವುದು.

ರಾಜ್ಯಾದ್ಯಂತ ವಿಶೇಷ ಘಟಕ ಯೋಜನೆಯಡಿ ರೂ.142.00 ಲಕ್ಷ ಅನುದಾನದಲ್ಲಿ 1014 ವಸತಿ ಹಾಗೂ ಕಾರ್ಯಾಗಾರಗಳು ಮತ್ತು ಗಿರಿಜನ ಉಪಯೋಜನೆಯಡಿ ರೂ. 44.00 ಲಕ್ಷ ಸಹಾಯಧನದಲ್ಲಿ 314 ವಸತಿ ಹಾಗೂ ಕಾರ್ಯಾಗಾರಗಳಂತೆ ಹಾಗಾಗಿ ಒಟ್ಟು 1328 ವಸತಿ ಹಾಗೂ ಕಾರ್ಯಾಗಾರಗಳನ್ನು

ನಿರ್ಮಿಸಲಾಗುವುದು.

ಒಂದು ವಸತಿ ಹಾಗೂ ಕಾರ್ಯಾಗಾರದ ನಿರ್ಮಾಣದ ವೆಚ್ಚವನ್ನು ರೂ.40,000ಗಳಿಗೆ ಸೀಮಿತಗೊಳಿಸಿ ಕನಿಷ್ಠ 300 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲಾಗುವುದು. ಈ ಎಲ್ಲಾ ವಸತಿ ಹಾಗೂ ಕಾರ್ಯಾಗಾರಗಳನ್ನು ರಾಜೀವಗಾಂಧಿ ಗ್ರಾಮೀಣ ಗೃಹ ನಿರ್ಮಾಣ ನಿಗಮ (ನಿ) ದವರ ಸಹಯೋಗದೊಂದಿಗೆ ನಿರ್ಮಿಸಲು ಯೋಜಿಸಿದೆ. ಪ್ರತಿ ಘಟಕದ ನಿರ್ಮಾಣ ವೆಚ್ಚವನ್ನು ಈ ಕೆಳಗೆ ಕಾಣಿಸಿದಂತೆ ಭರಿಸಲಾಗುವುದು.

1. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ವಿಶೇಷ ಘಟಕ ಯೋಜನೆ: ಗಿರಿಜನ ಉಪಯೋಜನೆಯಡಿ ಅನುದಾನ ರೂ.14,000

2. ರಾಜೀವ್‌ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ನಿಗಮದ ವತಿಯಿಂದ ಅನುದಾನ - ರೂ.10,000

3. ರಾಜೀವ್‌ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ನಿಗಮದ ವತಿಯಿಂದ ಸಾಲ - ರೂ.16,000

(ಈ ಮೊತ್ತವನ್ನು ಫಲಾನುಭವಿಗಳು ತಮ್ಮ ವಂತಿಕೆ, ಇದನ್ನು ಫಲಾನುಭವಿಗಳು ಸ್ಥಳೀಯವಾಗಿ ದೊರೆಯುವ ಕಟ್ಟಡ ಸಾಮಗ್ರಿಗಳನ್ನು ಒದಗಿಸುವ ಮೂಲಕ ಹಾಗೂ ತಮ್ಮ ಶ್ರಮದಿಂದ ಭರಿಸಬಹುದು. ಇದು ಸಾಧ್ಯವಾಗದೆ ಇದ್ದ ಪಕ್ಷದಲ್ಲಿ ರಾಜೀವ್‌ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ನಿಗಮದಿಂದ ಸಾಲದ ರೂಪದಲ್ಲಿ ಪಡೆಯಬೇಕಾಗುವುದು)

ಒಟ್ಟು ರೂ.40,000

ಶ್ರೀ ಕರಿಯಣ್ಣ: ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ ಇದುವರೆಗೂ ಏನೂ ಮಾಡಿಕೊಟ್ಟಿಲ್ಲ ಎಂದಿದ್ದಾರೆ. ಏತಕ್ಕಾಗಿ ಅವರಿಗೆ ಸಣ್ಣ ಕೈಗಾರಿಕೆಗಳ ಸ್ಥಾಪನೆಯಲ್ಲಿ ಉತ್ತೇಜನ ಕೊಟ್ಟು ಮಾಡಿಸಲಿಲ್ಲವೆಂಬುದನ್ನು ಸಚಿವರು ತಿಳಿಸಬೇಕು. ಹಾಗೆಯೇ ಮುಂದಿನ ಪ್ರಶ್ನೆಯಲ್ಲಿ ಅವರಿಗೆ ಮನೆಗೊಂದು ವರ್ಕಿಂಗ್‌ಶೆಡ್ಸ್ ಅನ್ನು ಇಂತಿಂಥ ಕಡೆ ಕಟ್ಟಿಸಿಕೊಟ್ಟಿದ್ದೇವೆಂದು ತಿಳಿಸಿದ್ದಾರೆ, ಈ ಮನೆಗಳನ್ನು ಯಾವ ಕೈಗಾರಿಕೆಗಾಗಿ ಕಟ್ಟಿಸಿಕೊಟ್ಟಿದ್ದೀರಿ? ಯಾವ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ? ಎಲ್ಲೆಲ್ಲಿ ಅಂಥವು ಇವೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಆರ್.ಕಾಶಪ್ಪನವರ್: ಅಧ್ಯಕ್ಷರೇ, ಸರ್ಕಾರೀ ಸ್ವಾಮ್ಯದ ಉದ್ದಿಮೆಗಳಲ್ಲಿ ಒಂದನ್ನು ಬಿಟ್ಟರೆ ಬೇರೆ ಉದ್ದಿಮೆಗಳು ಸಣ್ಣ ಕೈಗಾರಿಕೆಯಲ್ಲಿಲ್ಲ. ಅದರಲ್ಲೂ ವಿಶೇಷವಾಗಿ ಎಸ್‌ಸಿಎಸ್‌ಟಿ ಎಂಬುದಾಗಲೀ ಇತರರಿಗಾಗಲೀ ಎಂದು ಏಂಗಡಿಸಿ ಉದ್ದಿಮೆಗಳನ್ನು ಸರ್ಕಾರ ಸ್ಥಾಪಿಸಿಲ್ಲ. ಎಲ್ಲಾ ಜನರಿಗೂ ಏನು ಸಹಾಯ ಸೌಲಭ್ಯ ಕೊಡುತ್ತಿದ್ದೇವೋ ಅದಕ್ಕಿಂತ ಹೆಚ್ಚಿನ ಸಹಾಯವನ್ನು ಎಸ್‌ಸಿಎಸ್‌ಟಿ ಜನರಿಗೆ ಕೊಡಲಾಗುತ್ತಿದೆ. ನಮ್ಮ ಇಲಾಖೆಯಡಿಯ ಲಿಡ್ಕರ್‌ನಲ್ಲಿ ಎಸ್‌ಸಿಎಸ್‌ಟಿ ಜನರಿಗೆ ಹೆಚ್ಚಿನ ಉದ್ಯೋಗವನ್ನು ನಾವು ಕಲ್ಪಿಸುತ್ತಿದ್ದೇವೆ. ಮತ್ತು ಅವರು ಯಾವುದೇ ಸಣ್ಣ ಕೈಗಾರಿಕೆ ಸ್ಥಾಪನೆ ಮಾಡುವೆವು ಎಂದು ಬಂದರೆ ಪ್ಯಯಾರಿಟಿ ಬೇಸಿಸ್ ಮೇಲೆ ಅವರಿಗೆ ಮತ್ತು ಮಹಿಳೆಯರಿಗೆ ಟೈನಿ ಮತ್ತು ಸಣ್ಣ ಕೈಗಾರಿಕೆಗಳಿಗೆ 5 ಪರ್ಸೆಂಟ್ ಹೆಚ್ಚಿನ ಸೌಲಭ್ಯ ಕೊಡುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಲಿಡ್ಕರ್‌ನಡಿ ಬರುವ ಚರ್ಮಗಾರಿಕಾ ಕೇಂದ್ರಗಳು, ಹದ ಮಾಡುವ ಕೇಂದ್ರಗಳು - ಇವುಗಳಲ್ಲಿ ಕೆಲಸ ಮಾಡುವವರಿಗೆ ನಾವು ವಿಶೇಷ ಮನೆಗಳನ್ನೂ ಕಟ್ಟಿಸಿಕೊಟ್ಟಿದ್ದೇವೆ.

ತರೀಕೆರೆ ತಾಲ್ಲೂಕಿನ ಅಜ್ಜಂಪುರ ಹೋಬಳಿ ಶಿವನಿ ಗ್ರಾಮದಲ್ಲಿ ತಂಗಿನ ನಾರು ಕಾರ್ಖಾನೆಗೆ ಸಹಾಯಧನ ಬಿಡುಗಡೆ.

225(2062)

ಶ್ರೀ ನೀಲಕಂಠಪ್ಪ ಬಿ.ಆರ್.(ತರೀಕೆರೆ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನ ಅಜ್ಜಂಪುರ ಹೋಬಳಿ ಶಿವನಿ ಗ್ರಾಮದಲ್ಲಿನ ನಾರು ಕಾರ್ಖಾನೆಗೆ ಕಳೆದ 3 ವರ್ಷಗಳಲ್ಲಿ ಸಹಾಯಧನ ರೂಪದಲ್ಲಿ ಬಿಡುಗಡೆ ಮಾಡಲಾಗಿರುವ ಹಣವೆಷ್ಟು;

ಆ) ಈ ಕಾರ್ಖಾನೆ ಯಾವ ಸಂಸ್ಥೆಗೆ ಸೇರಿದ್ದು ಇದರ ಪದಾಧಿಕಾರಿಗಳು ಯಾರು ಹಾಗೂ ಕಾರ್ಯಚಟುವಟಿಕೆಗಳೇನು?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):

ಅ) ತರೀಕೆರೆ ತಾಲ್ಲೂಕಿನ ಅಜ್ಜಂಪುರ ಹೋಬಳಿಯ ಶಿವನಿಯಲ್ಲಿ ತಂಗಿನ ನಾರು ಉತ್ಪಾದನಾ ಘಟಕ ಸ್ಥಾಪನೆಗೆ ಕಳೆದ ಮೂರು ವರ್ಷಗಳಲ್ಲಿ ರೂ.4.00 ಲಕ್ಷ ಸಹಾಯಧನ ಬಿಡುಗಡೆಯಾಗಿದೆ.